doc-541
T.P-2

Reg No B G 155 7—9—72

55th Year of Publication 'Satyavadi' daily, Mysore 4

In State – The First
Golden Jubilee Celebrated Paper
★
News, Views, Dharmic Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಸಂದರ್ಶಿಸಿದ ಪತ್ರಿಕೆ

ಸ್ಥಾಪಕರು: ಅರಮನೆ ಸರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಸ್. ಎಸ್. ಕೃಷ್ಣರಾವ್ [2 ಪೈಸೆ

ತಾಸೀಲ್ದಾರರಿಗೆ ಕುಂಸಿವಾಲಿ ರೈತರ ಬೆದರಿಕೆ

ಜಿಲ್ಲೆಯ ಪರಿಸ್ಥಿತಿ

ಮೈಸೂರು— ಜಿಲ್ಲೆಯಲ್ಲಿ ತಾ ॥ 3 ಮತ್ತು 4 ರಲ್ಲಿ ಪ್ರವಾಸ ನಡೆಸಿದ ಜಿಲ್ಲಾಧಿಕಾರಿಗಳು, ಆ ಭಾಗದ ಪರಿಸ್ಥಿತಿಯನ್ನೂ ಪರಿಹಾರ ಕಾರ್ಯಗಳನ್ನೂ ವಿವರಿಸಿ ಪತ್ರಿಕಾ ಪ್ರಕಟನೆ ಹೊರಡಿಸಿರುವರು – 1050 ಗ್ರಾಮಗಳಲ್ಲಿ ಭೂ ಕಂದಾಯ ವಸೂಲಿ ನಿಲ್ಲಿಸಲು ಆಜ್ಞೆ ಮಾಡಿರುವರು.

★

ರೇಖೆ ಗುರುತಿಗೆ ಅಡಚಣೆ

ನವದೆಹಲಿ— ಜಮ್ಮು ಕಾಶ್ಮೀರದಲ್ಲಿ ಹತೋಟಿ ರೇಖೆಯು ಗುರುತು ಹಾಕುವ ಬಗ್ಗೆ ತೊಂದರೆಗಳು ಕಂಡುಬಂದಿದ್ದು, ಅಂತರರಾಷ್ಟ್ರೀಯ ಗಡಿಯಿಂದ ಭಾರತ-ಪಾಕ್ ಸೈನ್ಯಗಳ ವಾಪಸ್ಸು ತಡವಾಗಬಹುದೆಂದು ವಿದೇಶಾಂಗ ಕಛೇರಿ ವಕ್ತಾರರೊಬ್ಬರು ಹೇಳಿದರು – ಇವರಿಂದ ಶೃಂಗ ಸಮ್ಮೇಳನ ಸಂಶಯಾಸ್ಪದಕ್ಕೆ ಒಳಗಾಗಬಹುದೆನ್ನಲಾಗಿದೆ.

●

ಸಂಸಾರದ ಎಲ್ಲಾ 9 ಮಂದಿಯ ಆತ್ಮಹತ್ಯೆ

ಈರೋಡು— ರೈಲ್ವೇ ಮೇಲ್ ಸರ್ವಿಸ್ಸಿನ ಕೆಲಸಗಾರ ತನಿಷಾಚಲಂ ಸೇರಿ ಅವರ ಸಂಸಾರದ ಒಟ್ಟು 9 ಮಂದಿಯೂ ತಿಗಣೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡರು.

★

ಮಂತ್ರಿಗಳನ್ನು ಎತ್ತು ಕೆಡವಿತು

ಬೆಂಗಳೂರು— ಗುಲ್ಬರ್ಗ ಜಿಲ್ಲೆ ಅಫ್ಜಲಪುರದ ಹತ್ತಿರ, ಪ್ಲೇಟ್ ಗೃಹ ಮಂತ್ರಿ ಶ್ರೀ ಕಿತ್ತೂರ್‌ರವರ ಗೌರವಾರ್ಥವಾಗಿ ಗ್ರಾಮಸ್ಥರು ಏರ್ಪಡಿಸಿದ್ದ- ಮೆರವಣಿಗೆಯಲ್ಲಿ ಮುಂಧಿದ್ದ ಮಂತ್ರಿಗಳನ್ನು ಒಂದು ಎತ್ತು ತಿವಿದು ಕೆಳಕ್ಕೆ ಕೆಡವಿತು ; ಸ್ವಲ್ಪ ಗಾಯಗೊಂಡರು.

ಶಾಸನಸಭೆ ಮುಂದೆ ಪ್ರದರ್ಶನ

ಪಾಟ್ನಾ— ಬೀಹಾರ್‌ನ ಶಾಸನಸಭೆಯ ಮುಂದೆ ನಿನ್ನೆ 10000 ವಿದ್ಯಾರ್ಥಿಗಳ ಗುಂಪಿನ ಮೇಲೆ ಪೋಲೀಸರು ಅಶ್ರುವಾಯು ಪ್ರಯೋಗಿಸಿ ಲಾಠಿಚಾರ್ಜು ಮಾಡಿದರು – ಈ ಘರ್ಷಣೆಯಲ್ಲಿ ಕೆಲವರು ಶಾಸಕರೂ ಸೇರಿ 50 ನುಂದಿ ಗಾಯಗೊಂಡರು

★

ಮದರಾಸು ಮುಖ್ಯಮಂತ್ರಿಗಳ ಕಡೆಗೆ ಚಪ್ಪಲಿ ಎಸೆತ

ತುತ್ತುಕುಡಿ— ಇಲ್ಲಿಯ ವಿ ಓ ಸಿ ಕಾಲೇಜಿನಲ್ಲಿ ವಿ. ಓ. ಚಿದಂಬರಪಿಳ್ಳೆಯರ ಜನ್ಮ ಶತಮಾನೋತ್ಸವವನ್ನು ಪ್ರಧಾನಿ ಇಂದಿರಾರವರು ಉದ್ಘಾಟಿಸಿದರು, ಅಧ್ಯಕ್ಷತೆಯನ್ನು ವಹಿಸಿದ್ದ ತಮಿಳುನಾಡು ಮುಖ್ಯ ಮಂತ್ರಿ ಶ್ರೀ ಕರುಣಾನಿಧಿಯರ ಕಡೆ ವಿದ್ಯಾರ್ಥಿಗಳು ತಮ್ಮ ಅಸಂತೋಷ ವ್ಯಕ್ತ ಪಡಿಸಿ ಕೂಗುತ್ತಾ ಚಪ್ಪಲಿ ಎಸೆದರು – ಡಿ ಎಂ ಕೆ ಜನ ವಿದ್ಯಾರ್ಥಿಗಳನ್ನು ಹೊಡೆಯುತ್ತಿದ್ದಾಗ ಪೋಲೀಸರು ಬೆತ್ತಗಳನ್ನು ಕಿತ್ತುಕೊಂಡರು.

★

ರೈಲುಗಳ ಓಡಾಟ ಮನ್ನಾ

ಮದರಾಸು— ಲೋಕೋ ನೌಕರರ ಮುಷ್ಕರಕ್ಕಾಗಿ ಅನೇಕ ರೈಲುಗಳ ಓಡಾಟ ನಿಲ್ಲಿಸಲಾಗಿದೆ

★

ಮತ್ತೂ ನೆರವಿಗೆ ಕೇಳಿಕೆ

ಬೆಂಗಳೂರು— ಪ್ರಧಾನಿ ಇಂದಿರಾರವರು ಮಧುರೈಗೆ ಹೋಗುವ ಮಾರ್ಗದಲ್ಲಿ ವಿಮಾನ ನಿಲ್ದಾಣದಲ್ಲಿ 25 ನಿಮಿಷಗಳು ನಿಂತಾಗ, ಮುಖ್ಯಮಂತ್ರಿಗಳು ಶ್ರೀ ದೇವರಾಜಅರಸ್‌ರವರು ಅವರನ್ನು ಕಂಡು, ರಾಜ್ಯದ ಪರಿಹಾರ ಕಾರ್ಯಗಳಿಗಾಗಿ ಆಗಲೇ ಕೇಳಿರುವ ರೂ. 16 5 ಕೋಟಿ ಜೊತೆಗೆ ಹೆಚ್ಚಾಗಿ ರೂ. 12.46 ಕೋಟಿಯನ್ನು ವಿನಂತಿಸಿದರು.

ರೈತರ ಬೆದರಿಕೆ

ಗುಲ್ಬರ್ಗ— ಒಂದು ವಾರದೊಳಗೆ ದನಗಳಿಗೆ ನೀವು ಸರಬರಾಜು ಮಾಡದಿದ್ದರೆ, ತಮ್ಮ ಜಾನುವಾರುಗಳನ್ನು ತಾಸೀಲ್ದಾರರ ಆಫೀಸು ಕಾಂಪೌಂಡಿನಲ್ಲಿ ಸರಕಾರ ನೋಡಿಕೊಳ್ಳಲು ಬಿಡುವುದಾಗಿ ಕುಂಸಿವಾಲ್ಲಿ ರೈತರು ತಾಸಿಲ್ದಾರರಿಗೆ ಕೊಟ್ಟ ಮನವಿಯಲ್ಲಿ ಬೆದರಿಕೆ ಹಾಕಿರುವರು.

ಪೌರಸಭೆ ವಿಸರ್ಜನೆ

ಗುಡಿಬಂಡೆ— ಇಲ್ಲಿಯ ಪೌರಸಭೆಯ ಅವಧಿಯು ಆಗಸ್ಟ್ 31 ಕ್ಕೆ ಮುಗಿದುದ್ದರಿಂದ ಸರಕಾರ ಅದನ್ನು ವಿಸರ್ಜಿಸಿದೆ – 6 ತಿಂಗಳ ಕಾಲ ಅಡ್ಮಿನಿಸ್ಟ್ರೇಟರನ್ನು ನೇಮಿಸಲಾಗಿದೆ – ಕೂಡಲೇ ಚುನಾವಣಾ ಏರ್ಪಾಡಿಗೆ ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ.

ಅರಬ್ಬರ ಧಾಳಿ

ಮ್ಯೂನಿಚ್— ಒಲಂಪಿಕ್ ಗ್ರಾಮದ ಮೇಲೆ ನಡೆದ ಅರಬ್ಬರ ಧಾಳಿಯಲ್ಲಿ 17 ಮಂದಿ ಕೊಲ್ಲಲ್ಪಟ್ಟರು – ಈ ಪೈಕಿ ಇಸ್ರೇಲ್ ಕ್ರೀಡಾ ತಂಡದವರು 11 ಮಂದಿ, ಅರಬ್ ಭಯೋತ್ಪಾತಕರು 15 ಮಂದಿ, ಪಶ್ಚಿಮ ಜರ್ಮನಿ ಪೋಲೀಸಿನವನು ಒಬ್ಬ.

ಸ್ಪರ್ಧಿಸುವುದಿಲ್ಲ

ಮಂಗಳೂರು— ಹಳೇ ಕಾಂಗ್ರೆಸ್ಸು ಮಂಗಳೂರು ಮತ್ತು ಉಡುಪಿ ಪೌರಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎನ್ನಲಾಗಿದೆ.

ಶಿಕ್ಷೆ ಖಾಯಂ

ಬೆಂಗಳೂರು — ಸೈಕೋರ್ಟಿನಲ್ಲಿ, ಮಹಾರಾಜರ ಮಾಜಿ ಎಡಿಸಿ ಶ್ರೀ ಧರಣಿ ಪಾಲರ ಅಪೀಲು ವಜಾಮಾಡಲ್ಪಟ್ಟು ಶಿಕ್ಷೆಯನ್ನು 6 ತಿಂಗಳಿಂದ 2 ತಿಂಗಳು ಸಾದಾ ಸಜೆಕ್ಕೆ ಖಾಯಂ ಮಾಡಿತು.

ನಿಷೇಧಿಸಲ್ಪಟ್ಟಿದೆ

ನವದೆಹಲಿ– ಲೋಕೋ ನೌಕರರ ಮುಷ್ಕರವನ್ನು ಕೇಂದ್ರ ಸರಕಾರ ಭಾರತ ರಕ್ಷಣಾ ನಿಬಂಧನೆಗಳ ಮೇರೆ ನಿಷೇಧಿಸಿದೆ.

ನೀರಿನ ರೇಷ್ಮೆ

ಬೆಂಗಳೂರು— ಧಾರವಾಡ ಜಿಲ್ಲೆಯಲ್ಲಿ ನೀರಿನ ಅಭಾವ ತೀವ್ರವಾಗಿದೆ – ಹೆಬಸೂರು ಗ್ರಾಮದಲ್ಲಿ ಪ್ರತಿಯೊಬ್ಬರಿಗೂ ದಿನಕ್ಕೆ 2 ಗ್ಯಾಲ್ ನೀರಿನ ರೇಷ್ಮೆ ಕಾರ್ಡುಗಳು ಕೊಡಲಾಗಿದೆ

ಅಬ್ದುಲ್ಲರ ಅಪಸ್ವರ

ಶ್ರೀನಗರ— ವೇರೆವೇರೆ ಶಕ್ತಿ ಗುಂಪುಗಳ ಉಪಗ್ರಹಗಳಾಗಿರುವ ಭಾರತ ಮತ್ತು ಪಾಕಿಸ್ತಾನಗಳು ಕಾಶ್ಮೀರದ ಭವಿಷ್ಯವನ್ನು ನಿರ್ಣಯಿಸಲು ಹಕ್ಕಿಲ್ಲವೆಂದು ಷೇಕ್ ಅಬ್ದುಲ್ಲರು ಹೇಳಿದರು.

ಜಾಕ್‌ಪಾಟ್ ಹಣ

ಮೈಸೂರು— ಬುಧವಾರದ ರೇಸ್ಸಿನಲ್ಲಿ ಜಾಕ್‌ಪಾಟ್ ಪಡೆಯುವ ಟಿಕೇಟಿಲ್ಲದೆ, ಶೇಖರಿಸಲಾಗಿದ್ದ ರೂ. 137946 ಮುಂದಕ್ಕೆ ಇಡಲಾಯಿತು

24 ಮತ್ತು 25 ನೇ ತಿದ್ದುಪಡಿ

ನವದೆಹಲಿ— ರಾಜ್ಯಾಂಗದ 24 ಮತ್ತು 25 ನೇ ತಿದ್ದುಪಡಿಗಳನ್ನು ರದ್ದುಪಡಿಸಲ್ಪಡಬೇಕೆಂದು ಸುಪ್ರೀಂ ಕೋರ್ಟಿನಲ್ಲಿ ಗಣಿ ಮತ್ತು ಕಲ್ಲಿಜಲು ಗಣಿ ಹಿತಾಸಕ್ತರು ರಿಟ್ ಹಾಕಿದ್ದಾರೆ.

ರಕ್ಷಣಾ ನಿಧಿ

ನವದೆಹಲಿ— ಡಿಸೆಂಬರು 71 ರಿಂದ ಆಗಸ್ಟ್ 72 ರವರೆಗೆ ರಿಜರ್ವ್ ಬ್ಯಾಂಕಿನಲ್ಲಿ ರಾಷ್ಟ್ರೀಯ ರಕ್ಷಣಾ ನಿಧಿಗೆ 32.45 ಕೋಟಿ ರೂ. ಗಳು ಜಮಾ ಮಾಡಲಾಗಿದೆ.

ಶಿಕ್ಷಕರು

ರಾಷ್ಟ್ರದ ಅಭಿವೃದ್ಧಿಗೆ ಶಿಕ್ಷಕರ ಸೇವೆ ಅತಿ ಮುಖ್ಯವಾದದ್ದು ; ಆ ದ್ದ ರಿಂದ ಸಮಾಜ ಅವರಿಗೆ ಗೌರವಯುತವಾದ ಸ್ಥಾನವನ್ನು ನೀಡಿ ಅವರು ತಮ್ಮಲ್ಲಿನ ಅತ್ಯು ತ್ತಮವಾದ ವಿದ್ಯೆಯನ್ನು ನೀಡಲು ಸಹಾಯಕವಾಗುವಂತೆ ಅವರಿಗೆ ಸೂಕ್ತ ವಾ ತಾವರಣವನ್ನು ಕಲ್ಪಿಸಬೇಕು, ಎಂದು ಪ್ರಧಾನಿ ಇಂದಿರಾರವರು ಶಿಕ್ಷಕರ ದಿನಾಚರ ಣೆಯಲ್ಲಿ ಕೊಟ್ಟ ಸಂದೇಶದಲ್ಲಿ ಹೇಳಿರುವರು.

ವಿಜ್ಞಾನ ಮೇಧಾಶಕ್ತಿ

ಬೆಂಗಳೂರು— ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ಯು 1973 ಜನವರಿ 2 ರಿಂದ ಮೈಸೂರು ರಾಜ್ಯದ ವಿವಿಧ ಸ್ಥಳಗಲ್ಲಿ ರಾಷ್ಟ್ರೀಯ ವಿಜ್ಞಾನ ಮೇಧಾಶಕ್ತಿ ಪರೀಕ್ಷೆ (ಲಿಖಿತ ಪರೀಕ್ಷೆ) ಯನ್ನು ನಡೆಸುತ್ತದೆ.

ತಾಮ್ರ ಪತ್ರ

ನವದೆಹಲಿ— ಈ ಆಗಸ್ಟು 15 ರಿಂದು ಪ್ರಾರಂಭವಾದ ಸ್ವಾತಂತ್ರ ಜಯಂತಿ ವರ್ಷದಲ್ಲಿ 50000 ಸ್ವಾತಂತ್ರ್ಯ ಹೋರಾಟಗಾರರಿಗೆ ತಾಮ್ರ ಪತ್ರ ಕೊಟ್ಟು ಗೌ ರವಿಸಲಾಗುವುದೆಂದು ಪ್ರಕಟವಾಗಿದೆ.

★

ಭೂದಾನ

ನವದೆಹಲಿ— ಭಾರತದಲ್ಲಿ ಇಲ್ಲೀವರೆಗೆ 493127 ಸಂಸಾರಗಳಿಗೆ ವ್ಯವಸಾ ಯ ಯೋಗ್ಯವಾದ 1250000 ಎಕ್ರೆ ಭೂದಾನ ಭೂಮಿಯನ್ನು ಹಂಚಲಾಗಿದೆ.

ವುಡ್‌ಲ್ಯಾಂಡ್ 8 9 72 ರಿಂದ ಆಮೋಘ ಪ್ರಾರಂಭ

ಫಿಲಂಯುಗ ಅರ್ಪಿಸುವ

ಆ ಂ ಖೊ ಆ ಂ ಖೊ ವೆ

ಹಿಂದಿ ಈಸ್ಟ್‌ಮ್ಯಾನ್ ಕಲರ್

ಪಾತ್ರ : ರಾಖಿ, ರಾಜೇಶ್ ರೋರ್ಷ ಮತ್ತು ಪ್ರಾಣ್

ಬೆಳಗಿನ ಪ್ರದರ್ಶನ 10-30 ಕ್ಕೆ ತೀಸ್ರಿ ಮಂಜಿಲ್

ಅ ಪೆ ರಾ 2 ನೇ ವಾರ

— ಆತ್ಯಮೋಘ ಈಸ್ಟ್‌ಮ್ಯಾನ್ ಕಲರ್ ಹಿಂದಿ ಚಿತ್ರ —

ಬುಡ್ಡಾ ಮಿಲ್ ಗಯಾ

ನಟವರ್ಗ— ನವೀನ್ ನಿಶ್ಚಲ್, ಅರ್ಚನಾ, ಸೋನಿಯಾ ಸಹಾನಿ
ಓಂ ಪ್ರಕಾಶ್, ಲಲಿತಾ ಪವಾರ್
ಪ್ರತಿ ದಿನ 3 ಪ್ರದರ್ಶನಗಳು

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈದೀಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

★

ಆ ನೆ - ಹು ಡು ಗ

SHAKTI SUDHA

A Superb Tonic

ಅಖಿಲಭಾರತದಲಿ ಕೂಡಲೇ



ಗೋವಧೆ ನಿಷೇಧವಾಗಲಿ

Potect the Cow

Help The Gorakshana

— Humanitarian Propoganda Monthly ....

Quality Printing . Neat Binding

Lakshminarasimha Press

Sivarampet, Mysore

Edited Printedand Published by Dharmapracharanirata M S Krishna Rao (Propretor) at the Satvavadi Press Chamarajapuram Mysore